**ಅಧ್ಯಕ್ಷರು :–** ಅವರು ಗಮನಿಸುತ್ತಿಲ್ಲವೆನಿಸುತ್ತದೆ ಬಿಡಿ. ಮಾನ್ಯ ಸಚಿವರು ದಯವಿಟ್ಟು ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರುಗಳು ಪರಸ್ಪರ ಮಾತನಾಡಿಕೊಂಡು ಕುಳಿತರೆ, ಅದು ಚೆನ್ನಾಗಿರುವುದಿಲ್ಲ. ಇಲ್ಲೇನಾಗಿದೆ ಎಂದರೆ, ಎಲ್ಲಾ ಸದಸ್ಯರುಗಳೂ ಸರ್ಕಾರದವರು ನಮ್ಮ ಮಾತುಗಳನ್ನೇ ಕೇಳುತ್ತಿಲ್ಲ. ನಮ್ಮ ಸಮಸ್ಯೆಗಳು ಅಷ್ಟೊಂದು ಇವೆ, ನಮಗೆ ಕಷ್ಟ ಇದೆ, ಅದನ್ನು ನಾವು ಗಂಭೀರವಾಗಿ ಪ್ರಸ್ತಾಪ ಮಾಡುತ್ತಿದ್ದೇವೆ. ಅದೇನೋ ಹಳ್ಳಿಯಲ್ಲಿ ಗಾದೆ ಹೇಳುತ್ತಾರಲ್ಲಾ, ಆ ಗಾದೆ ಏನೆಂಬುದನ್ನು ನಾನಿಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆ ತರಹ ಮಾಡುತ್ತಿದ್ದೀರಿ, ಅವರಿಗೆ ಅದರ ಬಗ್ಗೆ ಗಮನವೇ ಇಲ್ಲವೆನ್ನುವಂತಹ ಆಕ್ಷೇಪಣೆಗಳನ್ನು ಮಾಡುತ್ತಿದ್ದಾರೆ. ದಯಮಾಡಿ ಮಾನ್ಯ ಸಚಿವರುಗಳು ವಿರೋಧ ಪಕ್ಷದ ಸದಸ್ಯರಾಗಲಿ ಅಥವಾ ಈ ಕಡೆಯ ಸದಸ್ಯರಾಗಲಿ ವಿಷಯಗಳನ್ನು ಪ್ರಸ್ತಾಪ ಮಾಡುವಾಗ attentive ಆಗಿ ಇರಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಹೇಳಿ ಸ್ವಾಮಿ.

**ಶ್ರೀ ವಾಟಾಳ್ ನಾಗರಾಜ್ :–** ಅವರು ಕೇಳುವಾಗ ನಾವು ಹೇಳಬೇಕು. ಇದು ತುಂಬಾ ಚೆನ್ನಾಗಿದೆ! ನಾವು ಹೇಳಿದಾಗ ಅವರು ಕೇಳಲಿಲ್ಲ.

**ಅಧ್ಯಕ್ಷರು :–** ಪ್ರಜಾಪ್ರಭುತ್ವ ಅಂದರೆ ಹಿಂಗೇ ಸ್ವಾಮಿ! ಇದಕ್ಕೆ ಪ್ರಜಾಪ್ರಭುತ್ವ ಅನ್ನುವುದು. ಹೇಳಿ ಸ್ವಾಮಿ.

**ವಿಷಯ : ಕುಡಿಯುವ ನೀರಿನ ಸಮಸ್ಯೆ ಕುರಿತು.**

**ಶ್ರೀ ನಿರ್ಮಾನಿ ಮುರುಗೇಶ್ ರುದ್ರಪ್ಪ (ಬೀಳಗಿ) :** ಸನ್ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣ ನದಿ ಮತ್ತು ಘಟಪ್ರಭ ನದಿ ಎರಡೂ ನದಿಗಳು ತುಂಬಿ ಹರಿಯುತ್ತಿದ್ದರೂ ಫೆಬ್ರವರಿಯಿಂದ ಮೇ ತಿಂಗಳವರೆಗೆ ಹೊಳೆ ಪೂರ್ತಿ ಖಾಲಿಯಾಗಿ ದನಕರುಗಳಿಗೆ ಮತ್ತು ಕುಡಿಯುವ ನೀರಿಗೆ ಸಮಸ್ಯೆ ಅತಿ ಹೆಚ್ಚಾಗಿರುವುದರಿಂದ ಹಿಡ್ಕಲ್ ಡ್ಯಾಂನಲ್ಲಿ ಇವತ್ತು 8 ರಿಂದ 10 ಟಿ.ಎಮ್.ಸಿ. ಅಷ್ಟು ನೀರನ್ನು ಕುಡಿಯುವ ನೀರಿಗಾಗಿ ಶೇಖರಣೆ ಮಾಡಿ ಇಟ್ಟಿರುವುದು, ಅದರಲ್ಲಿ ಎರಡು ಟಿ.ಎಮ್.ಸಿ ಅಷ್ಟು ನೀರನ್ನು ಕೃಷ್ಣ ನದಿ ಮೂಲಕವಾಗಿ ಅಥಣಿ ತಾಲ್ಲೂಕು ಮತ್ತು ಜಮಖಂಡಿ ತಾಲ್ಲೂಕಿನ ಮುಖಾಂತರ ಬೀಳಗಿ ತಾಲ್ಲೂಕಿಗೆ ಮುಟ್ಟುವ ತರಹ ನೀರನ್ನು ಬಿಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ತಾವು ಕಡಿಮೆ ನೀರನ್ನು ಪಾಯಿಂಟ್ ಐದು ಟಿ.ಎಮ್.ಸಿ. ಅಥವಾ

ಒಂದು ಟಿ.ಎಮ್.ಸಿ. ಅಷ್ಟು ನೀರು ಬಿಟ್ಟರೆ ಅದು ಬೀಳಗಿ ತಾಲ್ಲೂಕಿನವರೆಗೆ ಮುಟ್ಟಲಾರದೆ ಜಮಖಂಡಿ ತಾಲ್ಲೂಕು ಅಥವಾ ಅಥಣಿ ತಾಲ್ಲೂಕಿಗೆ ಮಾತ್ರ ಬರುತ್ತಿದೆ. ಅದು ಬೀಳಗಿ ತಾಲ್ಲೂಕಿನ ಕೊನೆಯ ಹಳ್ಳಿಯವರೆಗೆ ಕೃಷ್ಣಾ ನದಿ ಮುಖಾಂತರ ಕುಡಿಯುವ ನೀರಿನ ಸಲುವಾಗಿ ನೀರು ಬಿಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ :** ಮಾನ್ಯ ಅಧ್ಯಕ್ಷರೆ, ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.... ಅವರ ಭಾಷೆ ಸರಿಯಾಗಿ ಅರ್ಥವಾಗುವುದಿಲ್ಲ.

**ಶ್ರೀ ಗೋವಿಂದ ಕಾರಜೋಳ ಮಕಟಪ್ಪ :** ಮಾನ್ಯ ಉಪ ಮುಖ್ಯ ಮಂತ್ರಿಗಳೇ ತಾವು ಕೂತುಕೊಳ್ಳಿ ನಾನು ಹೇಳುತ್ತೇನೆ. ಒಂದು ನಿಮಿಷ ತಾವು ಈಲ್ಡ್ ಆಗಿ.

**ಶ್ರೀ ಸಿದ್ದರಾಮಯ್ಯ :** ನಾನು ಕಿವಿ ಇಟ್ಟು ಕೇಳಿದೆ, ಸ್ಪಷ್ಟವಾಗಿ ಗ್ರಹಿಸುವುದಕ್ಕೆ ಆಗಲಿಲ್ಲ.

**ಶ್ರೀ ಗೋವಿಂದ ಕಾರಜೋಳ ಮಕಟಪ್ಪ:** ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದು ಸಾರಿ ಬ್ರೀಫ್ ಮಾಡಿ ಬಿಡುತ್ತೇನೆ.

**ಶ್ರೀ ಜೆ. ಸಿ. ಮಾಧುಸ್ವಾಮಿ :** ಅಧ್ಯಕ್ಷರು ನಿಮಗೆ ಕರೆದದ್ದು ನಮಗೆ ಖುಷಿ ನೀವು ಕೇಳಲಿಲ್ಲ ನಮಗೆ ಗೊತ್ತು.

**ಶ್ರೀ ಸಿದ್ದರಾಮಯ್ಯ :** ಸತ್ಯ ಹೇಳುವುದು ತಪ್ಪಾ? ಸುಳ್ಳು ಹೇಳಲಾ?

**ಶ್ರೀ ಗೋವಿಂದ ಕಾರಜೋಳ ಮಕಟಪ್ಪ :** ನೀವು ಸುಳ್ಳು ಹೇಳುವುದು ಬೇಡ. ನಿಮಗೆ ಅರ್ಥವಾಗುವ ರೀತಿಯಲ್ಲಿ ಹೇಳುತ್ತೇನೆ. ಈ ತಿಂಗಳ ಮೊದಲನೇ ವಾರದಲ್ಲಿ ಎರಡನೇ ತಾರೀಖು ಬೆಳಗಾವಿಯಲ್ಲಿ ಮಲಪ್ರಭಾ, ಘಟಪ್ರಭಾ ಮತ್ತು ಕಾಡಾ ಅಚ್ಚುಕಟ್ಟು ಪ್ರದೇಶಗಳಲ್ಲಿ ಬರತಕ್ಕಂತಹ ನೀರನ್ನು ಬೇಸಿಗೆಯಲ್ಲಿ ಕುಡಿಯಲಿಕ್ಕೆ ಎಷ್ಟು ರಿಸರ್ವ್ ಮಾಡಬೇಕು ಎನ್ನುವುದರ ಬಗ್ಗೆ ಸಭೆ ಮಾಡಿದರು ಸುಮಾರು 8 ಟಿ.ಎಮ್.ಸಿ. ಅಷ್ಟು ನೀರು ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೋಸ್ಕರ ರಿಸರ್ವ್ ಮಾಡಿದಿವಿ ಒಂದು ಬಿಜಾಪುರ ಜಿಲ್ಲೆ ಎರಡು ಬಾಗಲಕೋಟೆ ಜಿಲ್ಲೆ ಆ ಎರಡು ಜಿಲ್ಲೆಗಳಿಗೆ ಬಿಡಬೇಕಾದ ನೀರನ್ನು ಹಿಡ್ಕಲ್ ಜಲಾಶಯದಿಂದ ಕೃಷ್ಣಾ ನದಿಗೆ ಮತ್ತು ಘಟಪ್ರಭಾ ನದಿಗೆ ಬಿಡಬೇಕೆಂದು

ಮಾನ್ಯ ಸದಸ್ಯರಾದ ಸಿದ್ದು ಸವದಿಯವರು ಮತ್ತು ಮುರುಗೇಶ್ ನಿರಾನಿಯವರು ವಿನಂತಿ ಮಾಡಿಕೊಂಡಿದ್ದಾರೆ. ಅವರ ಜೊತೆಯಲ್ಲಿ ನಾನು ಕೂಡ ವಿನಂತಿ ಮಾಡುತ್ತೇನೆ. ಹಿಡ್ಕಲ್ ಜಲಾಶಯದಲ್ಲಿರತಕ್ಕಂತಹ ನೀರನ್ನು ಬಿಡಲಿಕ್ಕೆ ಎರಡು ಟಿ.ಎಮ್.ಸಿ. ಅಲ್ಲಿಗೆ ಒಂದು ಟಿ.ಎಮ್.ಸಿ. ಮಲಪ್ರಭಾ ನದಿಗೆ ಮೂರು ಟಿ.ಎಮ್.ಸಿ. ಎರಡು ಕೃಷ್ಣಾ ಒಂದು ಘಟಪ್ರಭ ಈ ನೀರು ಬಿಡಲಿಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾಂ ಮತ್ತು ಬಾಗಲಕೋಟೆ ಅಧಿಕಾರಿಗಳಿಗೆ ಆದೇಶ ನೀಡಬೇಕು.

**ಡಾ॥ ಹೆಚ್.ಸಿ. ಮಹಾದೇವಪ್ಪ (ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):** ಮಾನ್ಯ ಅಧ್ಯಕ್ಷರೆ ಬಾಗಲಕೋಟೆ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತುಂಬಾ ಅನಾನುಕೂಲವಾಗಿದೆ. ಹಿಡ್ಕಲ್ ಡ್ಯಾಂನಲ್ಲಿ ಕೂಡ ನೀರು ಒಂದು ಟಿ.ಎಮ್.ಸಿ. ಬಿಟ್ಟು ಇನ್ನು ಕೆಲವು ಕಡೆ ತಲುಪಿಲ್ಲ ಬೆಳಗ್ಗಾಂನಲ್ಲಿ ಘಟಪ್ರಭಾದಲ್ಲಿ ನೀರು ಬಿಟ್ಟರೆ ಹಳ್ಳ ತೋಡಿ ಅಲ್ಲಿಯೇ ಹಿಡಿದುಕೊಂಡು ಪಂಪಸೆಟ್ ಇಟ್ಟು ನೀರು ಸೆಟ್ ಮಾಡಿಕೊಳ್ಳುತ್ತಾರೆ. ನೀರು ಕೆಳಗಡೆ ಬರುವುದಿಲ್ಲ. ಈ ತರಹ ಅನಾನುಕೂಲವಾಗಿದೆ. ಈ ಕೃಷ್ಣಾ ನದಿಯಿಂದ ನೀರು ಬಿಡಬೇಕು ಮತ್ತು ಮಹಾರಾಷ್ಟ್ರದಿಂದ ಕಳೆದ ಬಾರಿ ಸರ್ಕಾರ ನೀರುಬಿಡಿಸಿತ್ತು. ಬೆಳಿಗ್ಗೆ ನಾನು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಮಾನ್ಯ ಸದಸ್ಯರು ಮಾತನಾಡಿದ್ದು ನಾನು ಕೇಳಿಸಿಕೊಂಡಿದ್ದೇನೆ. ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಬಾಗಲಕೋಟೆ ನೀರಿನ ಸಮಸ್ಯೆಗೆ ಸಂಬಂಧಪಟ್ಟ ಹಾಗೆ ಘಟಪ್ರಭಾದಿಂದ ಎರಡು ಟಿ.ಎಮ್.ಸಿ. ಮತ್ತು ಕೃಷ್ಣಾದಿಂದ ಒಂದು ಟಿ.ಎಮ್.ಸಿ. ನೀರನ್ನು ಕೊಡಲಿಕ್ಕೆ ಮಾತನಾಡಿದ್ದೇನೆ. ನೀರಾವರಿ ಸಚಿವರ ಜೊತೆ ಮಾತನಾಡಿ ಆ ಜಿಲ್ಲೆ ಉಸ್ತುವಾರಿ ಸಚಿವನಾಗಿ ನೀರಾವರಿ ಇಲಾಖೆಗೆ ಸೂಚನೆ ಕೊಟ್ಟು ನೀರನ್ನು ಬಿಡುವುದಕ್ಕೆ ಪ್ರಯತ್ನ ಮಾಡಬೇಕು ಇದು ಒಂದು. ಬೆಳಗಾಂ ಜಿಲ್ಲೆಗೆ ನೀರು ಬಿಡಬೇಕೆಂದರೆ ಅಲ್ಲಿಯ ಜಿಲ್ಲಾಧಿಕಾರಿಗಳು ಮತ್ತು ಬಾಗಲಕೋಟೆ ಜಿಲ್ಲಾಧಿಕಾರಿಗಳು ಇಬ್ಬರೂ ಕೂತು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಒಂದು ಮೀಟಿಂಗ್ ಕರೆಯುತ್ತೇವೆಂದು ಹೇಳಿದ್ದಾರೆಂದು ಜಿಲ್ಲಾಧಿಕಾರಿಗಳು ದೂರವಾಣಿ ಮೂಲಕ ತಿಳಿಸಿದ್ದಾರೆ. ಆದಷ್ಟು ಬೇಗ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಘಟಪ್ರಭಾದಿಂದ ನೀರು ಬಿಡಿಸುವುದಕ್ಕೆ ನೀರಾವರಿ ಸಚಿವರ ಜೊತೆ ನಾನು ಖುದ್ದಾಗಿ ಭೇಟಿ ಮಾಡಿ ಸಮಸ್ಯೆಯ ಪರಿಹಾರಕ್ಕೆ ಸರ್ಕಾರದ ವತಿಯಿಂದ ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಸದಸ್ಯರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

**ಶ್ರೀ ಗೋವಿಂದ ಮಕ್ಕಪ್ಪ ಕಾರ್ಜೋಳ:** ಮಾನ್ಯ ಅಧ್ಯಕ್ಷರೆ ಮಹಾರಾಷ್ಟ್ರದ ಕೊಯ್ನಾ ಡ್ಯಾಂನಿಂದ ಕೃಷ್ಣಾ ನದಿಗೆ ನೀರು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಅದಕ್ಕೆ ಸರ್ಕಾರ ಸ್ವಲ್ಪ ಹಣ ಕೊಟ್ಟು ಮಹಾರಾಷ್ಟ್ರದಿಂದ ನೀರು ತೆಗೆದುಕೊಂಡರೆ ಬೇಸಿಗೆಯಲ್ಲಿ ಸಮಸ್ಯೆ ಆಗುವುದಿಲ್ಲ. ಈ ಹಿಡ್ಕಲ್ ಜಲಾಶಯದಲ್ಲಿ ಇರತಕ್ಕಂತಹ ನೀರನ್ನು ಸ್ವಲ್ಪ ಮಟ್ಟಿಗೆ ಉಳಿಸಿಕೊಂಡರೆ ಬೆಳಗಾಂ ಬಿಜಾಪುರ ಮತ್ತು ಬಾಗಲಕೋಟೆ ಈ ಮೂರು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಅದಕ್ಕಾಗಿ ಎರಡು ಟಿ.ಎಮ್.ಸಿ.ನೋ ಮೂರು ಟಿ.ಎಮ್.ಸಿ.ನೋ ಮಹಾರಾಷ್ಟ್ರದಿಂದ ದುಡ್ಡು ಕೊಟ್ಟು ಪ್ರತಿಸಾರಿ ತೆಗೆದುಕೊಳ್ಳುವುದು ರೂಢಿ ಇದೆ. ಅದೇ ರೀತಿಯಾಗಿ ಸರ್ಕಾರ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ ಎಂದು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್ :** ಮಾನ್ಯ ಅಧ್ಯಕ್ಷರೆ ಈ ಹೊಳೆಗಳಿಗೆ ನೀರು ಬಿಡಿಸುವ ವ್ಯವಸ್ಥೆ ಏನಿದೆ ಇಲ್ಲಿ ಪ್ರಶ್ನೆ ಹಾಕುವುದು ಇಟ್ಟುಕೊಳ್ಳಬಾರದು. ಬಹುಶಃ ಮಂತ್ರಿಗಳು ಇದನ್ನು ಮೊದಲೇ ಸರ್ಕಾರದಲ್ಲಿ ವಿಚಾರ ಮಾಡಿ ಮಾಡಬೇಕು. ಕೇವಲ ಮನುಷ್ಯರಿಗಷ್ಟೇ ತೊಂದರೆಯಾಗುವುದಿಲ್ಲ, ಪಶು ಪಕ್ಷಿ ಮತ್ತು ಪ್ರಾಣಿಗಳೂ ಕೂಡ ಸಾಯುತ್ತವೆ. ಹೊಳೆಗಳೆಲ್ಲಾ ಬತ್ತಿ ಹೋದರೆ ಮನುಷ್ಯರು ಹೇಗೋ ಬದುಕುತ್ತಾರೆ ಅದರೆ ಪಕ್ಷಿ ಪ್ರಾಣಿಗಳಿಗೆ ತೊಂದರೆಯಾಗುತ್ತದೆ. ಆನೆಗಳೆಲ್ಲಾ ಅಡವಿ ಬಿಟ್ಟು ಊರು ಸೇರಿವೆ. ನಾನು ಮೊನ್ನೆ ಹಾನಗಲ್‌ಗೆ ಹೋಗಿದ್ದೆ ಹಾನಗಲ್‌ನಲ್ಲಿ ಆನೆಗಳು ಬಂದು ಬಹಳ ತೊಂದರೆ ಕೊಡುತ್ತಿವೆ. ನಮ್ಮಲ್ಲಿ ನವಿಲುಗಳು, ಪಕ್ಷಿಗಳು ಹಾಗೂ ಪ್ರಾಣಿಗಳು ಸತ್ತು ಹೋಗಿವೆ. ಆ ಕಾರಣದಿಂದ ಸರ್ಕಾರದವರು ಯಾವುದೋ ಒಂದು ಕಡೆ ಅಲ್ಲಿನ ಮನುಷ್ಯರು ಹೇಗೋ ಬದುಕುತ್ತಾರೆ ನಾವು ಮನುಷ್ಯರ ಬಗ್ಗೆ ಅಷ್ಟೇ ಮಾತನಾಡುತ್ತೇವೆ. ಆದರೆ ಪ್ರಾಣಿಗಳು ಪಕ್ಷಿಗಳು ಬದುಕಬೇಕೆಂದರೆ ಎಲ್ಲಾ ನದಿಗಳಲ್ಲಿ ನೀರು ಶಾಶ್ವತವಾಗಿ ಹರಿಯುವ ಹಾಗೆ ಮಾಡಬೇಕು. ನೀರು ಅಲ್ಲಿ ಬರುವುದಕ್ಕೆ ಬಿಡದೆ ಖಾಯಂ ಆಗಿ ನೀರು ಹರಿಯುವ ಹಾಗೆ ವ್ಯವಸ್ಥೆ ಮಾಡಬೇಕು. ಹೊಳೆ ಒಣಗಿದ ಮೇಲೆ, ದಾಂಧಲೆ ಆದ ಮೇಲೆ ನೀರು ಬಿಡುವುದಕ್ಕೆ ಹೋಗುತ್ತಾರೆ. ನೀರು ಎಲ್ಲ ಬತ್ತಿ ಹೋಗುತ್ತದೆ. ಇನ್ನು ನೀರು ಇರುವಾಗಲೇ ಸ್ವಲ್ಪ ಬಿಡುತ್ತಾ ಹೋದರೆ ಖಂಡಿತ ನೀರು ಕಡಿಮೆ ಹೋಗುತ್ತದೆ ಎಲ್ಲಾ ಪ್ರಾಣಿ ಪಕ್ಷಿಗಳೂ ಬದುಕುತ್ತವೆ. ನಮ್ಮಲ್ಲಿ ಕೂಡ ಇವತ್ತು ಒಂದು ಪ್ರಶ್ನೆ ಹಾಕಿದ್ದೆ ಅನ್‌ಸ್ಟಾರ್ಡ್‌ನಲ್ಲಿ ಬಂದಿದೆ ಅದಕ್ಕೆ ಉತ್ತರ ಬಂದಿಲ್ಲ ನಮ್ಮ ಹೊಳೆಗಳೆಲ್ಲಾ ತುಂಬಿದ್ದವು ಒಣಗಿ ಹೋಗಿವೆ

ಪ್ರಾಣಿ ಪಕ್ಷಿಗಳು ಸಾಯುವುದಕ್ಕೆ ಹತ್ತಿವೆ. ನೀರು ಬಿಡಿ ಎಂದು ಹೇಳಿದರೆ ಮೂರು ತಿಂಗಳುಗಳಿಂದ ಹೇಳಿದರೂ ಯಾರೂ ಈ ಕಡೆ ಗಮನ ಕೊಡಲಿಲ್ಲ ಮೊನ್ನೆ ನೀರು ಬಿಟ್ಟರೆ ಅದು ಬರಲಿಲ್ಲ ಅಲ್ಲಿ ನಡು ನಡುವೆಯೇ ತುಂಬಿ ಹೋಗುತ್ತದೆ. ಹೀಗೆ ಲುಕ್ಸಾನು ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದು ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ಇದ್ದಾರೆ ಇನ್ನು ಮುಂದಿನ ವರ್ಷವಾದರೂ ಖಂಡಿತವಾಗಿ ಹೊಳೆ ಒಣಗುತ್ತವೆ. ಇನ್ನು ಮೇಲೇ ಕಾಯಂ ಆಗಿ ಹೊಳೆ ಹರಿಯುವುದಿಲ್ಲ ಡ್ಯಾಂನಲ್ಲಿ ಇರತಕ್ಕಂತಹ ಬಿಡತಕ್ಕಂತಹ ನೀರನ್ನು ಹೊಳೆಯಲ್ಲಿ ಶಾಶ್ವತವಾಗಿ ಒಣಗದ ಹಾಗೆ ನೋಡಿಕೊಳ್ಳಬೇಕೆಂದು ತಮ್ಮ ಮುಖೇನ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಸಿದ್ದು ಸವದಿ (ಜಮಖಂಡಿ):** ಮಾನ್ಯ ಅಧ್ಯಕ್ಷರೆ ಅಲ್ಲಿರತಕ್ಕಂತಹ ಸಮಸ್ಯೆ ಪರಿಹಾರ ಮಾಡಲಿಕ್ಕೆ ಇರುವ ಒಂದೇ ಒಂದು ಮಾರ್ಗ, ನಮ್ಮದು ಮಹಾರಾಷ್ಟ್ರದ ಕಾಲಮವಾಡಿಯಲ್ಲಿ ನಾಲ್ಕು ಟಿ.ಎಮ್.ಸಿ ಪಾಲು ಇದೆ. ಈ ಸಲ ಆ ಭಾಗದಲ್ಲಿ ಉತ್ತಮ ಮಳೆ ಆಗಿರುವುದರಿಂದ ನೀರನ್ನು ಬಳಸಿಕೊಂಡಿಲ್ಲ. ಮಾನ್ಯ ಸಚಿವರಾದ ಪ್ರಕಾಶ್ ಹುಕ್ಕೇರಿಯವರ ಜೊತೆ ಮಾತನಾಡಿದಾಗ ನಾನು ಕಳಮವಾಡಿಯಿಂದ ಎರಡು ಟಿಎಮ್‌ಸಿ ನೀರು ಬಿಡುತ್ತೇನೆಂದು ಹೇಳಿದ್ದಾರೆ ತಕ್ಷಣ ಅದನ್ನು ಕಾರ್ಯರೂಪಕ್ಕೆ ತಂದು ಎರಡು ಟಿಎಮ್‌ಸಿ ಏಕಕಾಲಕ್ಕೆ ಬಿಟ್ಟರೆ ಚಿಕ್ಕಪಟ್ಲಿ ಬ್ಯಾರೇಜಿನಿಂದ ಬೀಳಗಿ ತಾಲ್ಲೂಕಿನವರೆಗೆ ಹೋಗಿ ಜೂನ್‌ವರೆಗೆ ನಮಗೆ ಕುಡಿಯುವ ನೀರಿನ ಅವಶ್ಯಕತೆ ಬೀಳುವುದಿಲ್ಲ. ಆದರೆ ನೀವು ಹಿಡ್ಕಲ್ ಜಲಾಶಯದಿಂದ ನೀರು ಬಿಡುತ್ತಾ ಹೋದರೆ ಎರಡು ಟಿಎಮ್‌ಸಿ ಬಿಟ್ಟರೆ ಅರ್ಧ ಟಿಎಮ್‌ಸಿ ನೀರು ಕೂಡ ಕೃಷ್ಣಾ ನದಿ ಮುಟ್ಟುವುದಿಲ್ಲ. ಈ ರೀತಿ ನಡುವೆ ವೇಸ್ಟ್ ಆಗುತ್ತದೆ. ನೀರು ಪರ್ಕ್ಯುಲೇಷನ್ ಆಗುತ್ತದೆ. ನೀವು ಏನಾದರೂ ಆ ರೈತರಿಗೆ ಅನುಕೂಲ ಮಾಡಬೇಕೆಂದು ಇದ್ದರೆ ತಕ್ಷಣ ಇವತ್ತು ಅಲ್ಲಿರತಕ್ಕಂತಹ ನಮ್ಮ ಜಿಲ್ಲಾಧಿಕಾರಿಗಳಿಗೆ ಮಾತನಾಡಿ ಕಳಮವಾಡಿಯಿಂದ ಎರಡು ಟಿಎಮ್‌ಸಿ ನೀರು ಬಿಡುವ ವ್ಯವಸ್ಥೆ ಮಾಡಿದರೆ ನಾವೆಲ್ಲಾ ಬದುಕುತ್ತೇವೆ. ರೈತರಿಗೆ ನೀವು ಕಾಪಾಡಿದ ಹಾಗೆ ಆಗುತ್ತದೆ ಎನ್ನುವ ಮಾತು ತಮ್ಮ ಮುಖೇನ ಹೇಳ ಬಯಸುತ್ತೇನೆ.

**ಡಾ॥ ಹೆಚ್. ಸಿ. ಮಹಾದೇವಪ್ಪ :** ಸನ್ಮಾನ್ಯ ಅಧ್ಯಕ್ಷರೆ ನಾಳೆ ಮಾನ್ಯ ಸದಸ್ಯರು ಬಿಜಾಪುರ, ಬಾಗಲಕೋಟೆ, ಮತ್ತು ಪ್ರಕಾಶರವರು ಬೆಳಗಾಂ ಜಿಲ್ಲೆ ಉಸ್ತುವಾರಿ ಸಚಿವರು

ನಾನು ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಚರ್ಚೆ ಮಾಡಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಆ ಎರಡೂ ಜಿಲ್ಲಾಧಿಕಾರಿಗಳೂ ಸೇರಿ ನೀರಾವರಿ ಇಲಾಖೆಯವರೂ ಸೇರಿ ನಾಳೆಯೇ ಒಂದು ನಿರ್ದೇಶನ ಕೊಡುವುದಕ್ಕೆ ಪ್ರಯತ್ನ ಮಾಡೋಣ. ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರಿಗೆ ನಾಳೇಯೇ ಬೇಕಾದರೆ ಭೇಟಿ ಮಾಡೋಣ.

**ವಿಷಯ : ಪರಿಶಿಷ್ಟ ಜಾತಿ ಜನಾಂಗದ ಇಂಜಿನಿಯರ್‌ಗಳು ಬೆಂಗಳೂರಿನಲ್ಲಿ ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಬಗ್ಗೆ.**

**ಶ್ರೀ ಗೋವಿಂದ ಮಕ್ಕಪ್ಪ ಕಾರ್ಜೋಳ :** ಸನ್ಮಾನ್ಯ ಅಧ್ಯಕ್ಷರೆ ಕಳೆದ ಸುಮಾರು ದಿನಗಳಿಂದ ಪರಿಶಿಷ್ಟ ಜಾತಿ ಜನಾಂಗದ ಇಂಜಿನಿಯರ್ಸ್ ಬ್ಯಾಕ್‌ಲಾಗನಲ್ಲಿ ಅಪಾಯಿಂಟ್ ಆದವರಿಗೆ ಅವಧಿ ಮುಗಿದು ಅವರಿಗೆ ಟರ್ಮಿನೇಟ್ ಮಾಡಿದ್ದಾರೆಂದು ಅವರು ಆಮರಣ ಉಪವಾಸ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಏನು ಉತ್ತರ ಹೇಳುತ್ತದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

**ಅಧ್ಯಕ್ಷರು :** ಮುಖ್ಯಮಂತ್ರಿಗಳು ಇಲ್ಲ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ.

**ಶ್ರೀ ಗೋವಿಂದ ಕಾರ್ಜೋಳ ಮಕ್ಕಪ್ಪ:** ಪರಿಶೀಲನೆ ಮಾಡುವುದು ಬೇಡ 13,000 ಜನ ಪರಿಶಿಷ್ಟ ಜಾತಿ ಜನಾಂಗದ ಇಂಜಿನಿಯರ್ಸ್ ಬೆಂಗಳೂರಿನಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಏನಾದರೂ ಕಾಳಜಿ ವಹಿಸಬೇಕು.

**ಶ್ರೀ ಜಯಪ್ರಕಾಶ್ ಹಗ್ಡೆ ಕೆ. :** ಪರಿಶೀಲನೆ ಮಾಡುವುದಾದರೆ ಇವತ್ತು ಅಗತ್ಯವಿಲ್ಲ

**ಶ್ರೀ ಜೆ.ಸಿ. ಮಾಧುಸ್ವಾಮಿ :** ಅಧ್ಯಕ್ಷರಿಗೆ ಸರ್ಕಾರದ ಉತ್ತರದ ಮೇಲೆ ನಂಬಿಕೆ ಹೋಗಿ ಬಿಟ್ಟಿದೆ ಹೇಗೆ ಎಂದು ನಮಗೆ ಸಮಸ್ಯೆಯಾಗಿದೆ.

**ಶ್ರೀ ಸಿದ್ದರಾಮಯ್ಯ :** ಶೂನ್ಯ ವೇಳೆಯಲ್ಲಿ ಎತ್ತಿದ ತಕ್ಷಣ ಇಲ್ಲಿಯೇ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಹೇಳಿದರೆ ಹೇಗೆ? ಗಮನಕ್ಕೆ ತಂದು ಸರ್ಕಾರದ ಗಮನ ಸೆಳೆದಿದ್ದಾರೆ ಸರ್ಕಾರ ಪರಿಶೀಲನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ಯೋಗ್ಯ ಕ್ರಮ ತೆಗೆದುಕೊಳ್ಳುತ್ತದೆ.